# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30-07-2015ರ ನಡವಳಿಗಳು

## ವಿಷಯದ ಸಂಖ್ಯೆ : 151 / 2015-16

ವಿಷಯ: **Construction RCC Retaining wall to damaged SWD C-100 near Natasha Apartment, Domlur, Ward No.112 (2nd Stage).**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ ವಲಯದ ವಾರ್ಡ್ ಸಂಖ್ಯೆ:112ರ ದೊಮ್ಮಲೂರಿನ ನಟಾಶ ಅಪಾರ್ಟ್‌ಮೆಂಟ್ ಪಕ್ಕದ ಕಾಲುವೆಗೆ ಸಂಬಂಧಿಸಿದ್ದು, ಮಳೆಗಾಲದಲ್ಲಿ ಸದರಿ ನೀರುಗಾಲುವೆಯಿಂದ ನೀರು ಉಕ್ಕಿ ಹರಿದು ಅಕ್ಕಪಕ್ಕದ ಮನೆ ಮತ್ತು ಅಪಾರ್ಟ್‌ಮೆಂಟ್ ನಿವಾಸಿಗಳ ಆಸ್ತಿಪಾಸ್ತಿಗಳಿಗೆ ಹಾನಿ ಉಂಟಾಗುತ್ತಿರುತ್ತದೆ. ಆದುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ನೀರುಗಾಲುವೆಗೆ ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಈ ಬಡಾವಣೆಯ ತಗ್ಗು ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು 2014-15ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ರೂ.62.00 ಲಕ್ಷಗಳಿಗೆ ತಯಾರಿಸಿ, ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯಲಾಗಿದೆ.

ಸದರಿ ಕಾಮಗಾರಿಗೆ ದಿನಾಂಕ:23-06-2015 ರಂದು E-Procurment ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಅಧಿಸೂಚನೆಯನ್ನು ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06-07-2015 ಆಗಿದ್ದು, ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ತಾಂತ್ರಿಕ ಬಿಡ್‌ಗಳನ್ನು ದಿನಾಂಕ:08-07-2015 ರಂದು ತೆರೆಯಲಾಗಿದ್ದು, ತಾಂತ್ರಿಕವಾಗಿ ಇಬ್ಬರೂ ಗುತ್ತಿಗೆದಾರರು ಅರ್ಹತೆಯನ್ನು ಹೊಂದಲಾದ ಮೇರೆಗೆ ಮುಖ್ಯ ಅಭಿಯಂತರರು ದಿನಾಂಕ:09-07-2015 ರಂದು ಅನುಮೋದನೆ ನೀಡಿದ ನಂತರ ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಶ್ರೀ. ಮನು.ಎಲ್. ರವರು ಕಡಿಮೆ ದರ ರೂ.68,35,301.59 ನಮೂದಿಸಿದ್ದು, ಇವರು L1 ಆಗಿದ್ದು, ಆರ್ಥಿಕ ಬಿಡ್‌ನ ವಿವರಗಳು ಕೆಳಕಂಡಂತಿರುತ್ತದೆ.

| | | |
|---|---|---|
| 1. | ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ (2014-15ನೇ ಸಾಲಿನ ದರಪಟ್ಟಿಯಂತೆ) | ರೂ.59,66,598.94 |
| 2 | ಬಿಡ್ಡುದಾರರಾದ ಶ್ರೀ.ಮನು.ಎಲ್ ರವರು ನಮೂದಿಸಿರುವ ಟೆಂಡರ್ ಮೊತ್ತ | ರೂ.68,35,301.59 |
| 3 | 2014-15ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಟೆಂಡರ್‌ಗೆ ಇಟ್ಟ ಮೊತ್ತದ ಮೇಲಿನ ಶೇಕಡಾವಾರು ಹೆಚ್ಚಳ | ಶೇ.14.56% ಹೆಚ್ಚುವರಿ |

............................2

ಶ್ರೀ. ಮನು.ಎಲ್. ರವರು ನಮೂದಿಸಿರುವ ಮೊತ್ತವು ಮಂಜೂರಾದ ಟೆಂಡರ್‌ಗಿಟ್ಟ ಮೊತ್ತಕ್ಕೆ (2014-15ನೇ ಸಾಲಿನ ದರಪಟ್ಟಿ) ಹೋಲಿಸಿದಾಗ ಶೇ.14.56 ರಷ್ಟು ಹೆಚ್ಚುವರಿಯಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತಾಪಿತ ಕಾಮಗಾರಿಗೆ ಶ್ರೀ. ಮನು.ಎಲ್. ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.68,35,301.59 (ರೂಪಾಯಿ ಅರವತ್ತೆಂಟು ಲಕ್ಷದ ಮೂವತ್ತೈದು ಸಾವಿರದ ಮುನ್ನೂರ ಒಂದು ಮತ್ತು ಐವತ್ತೊಂಭತ್ತು ಪೈಸೆ ಮಾತ್ರ) ಗಳ (ಮಂಜೂರಾದ ಅಂದಾಜುಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.14.56 ರಷ್ಟು ಹೆಚ್ಚುವರಿ) ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 28-07-2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು